# ಆರು ಹಕ್ಕುಗಳು

## [ الحقوق الستة ]

[Kannada – ಕನ್ನಡ – كنادي ]

ಅಶ್ಶೈಖ್ ಅಬ್ದುರ್ರಹ್ಮಾನ್ ಇಬ್ನ್ ನಾಸಿರ್ ಅಸ್ಸಅ್‌ದೀ

الشيخ عبد الرحمن بن ناصر السعدي

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ترجمة: محمد حمزة بتوري

IslamHouse.com

1436 – 2015

بِسْمِ اللهِ الرَّحْمَنِ الرَّحِيم

**عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ: «حَقُّ الْمُسْلِمِ عَلَى الْمُسْلِمِ سِتٌّ». قِيلَ: مَا هُنَّ يَا رَسُولَ اللَّهِ؟ قَالَ: «إِذَا لَقِيتَهُ فَسَلِّمْ عَلَيْهِ، وَإِذَا دَعَاكَ فَأَجِبْهُ، وَإِذَا اسْتَنْصَحَكَ فَانْصَحْ لَهُ، وَإِذَا عَطَسَ فَحَمِدَ اللَّهَ فَشَمِّتْهُ، وَإِذَا مَرِضَ فَعُدْهُ، وَإِذَا مَاتَ فَاتَّبِعْهُ».**

ಅಬೂ ಹುರೈರಾ(ﷺ)ರಿಂದ ವರದಿ. ಪ್ರವಾದಿ(ﷺ)ರವರು ಹೇಳಿದರು: "ಮುಸ್ಲಿಮನಿಗೆ ಮುಸ್ಲಿಮನ ಮೇಲೆ ಆರು ಹಕ್ಕುಗಳಿವೆ." ಅವು ಯಾವುದೆಂದು ಕೇಳಲಾದಾಗ ಪ್ರವಾದಿ(ﷺ)ರವರು ಹೇಳಿದರು: "ನೀನು ಅವನನ್ನು (ಮುಸ್ಲಿಮನನ್ನು) ಸಂಧಿಸಿದರೆ ಅವನಿಗೆ ಸಲಾಮ್ ಹೇಳು, ಅವನು ನಿನ್ನನ್ನು ಕರೆದರೆ ಅವನಿಗೆ ಉತ್ತರ ನೀಡು, ಅವನು ನಿನ್ನೊಂದಿಗೆ ಸಲಹೆ ಕೇಳಿದರೆ ಅವನಿಗೆ ಸಲಹೆ ನೀಡು, ಅವನು ಸೀನಿದ ಬಳಿಕ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್ ಹೇಳು, ಅವನು ರೋಗಿಯಾದರೆ ಅವನನ್ನು ಸಂದರ್ಶಿಸು ಮತ್ತು ಅವನು ಮೃತಪಟ್ಟರೆ ಅವನನ್ನು ಹಿಂಬಾಲಿಸು." [ಸಹೀಹ್ ಮುಸ್ಲಿಮ್]

ಮುಸ್ಲಿಮನಿಗೆ ಮುಸ್ಲಿಮನ ಮೇಲಿರುವ ಈ ಆರು ಹಕ್ಕುಗಳನ್ನು ಯಾರಾದರೂ ತೀರಿಸಿದರೆ ಇದಲ್ಲದ ಬೇರೆ ಹೊಣೆಗಾರಿಕೆಗಳನ್ನು ನಿರ್ವಹಿಸುವುದು ಕೂಡ ಹೆಚ್ಚು ಪ್ರಾಮುಖ್ಯತೆಯುಳ್ಳದ್ದಾಗುತ್ತವೆ. ಈ ಹಕ್ಕುಗಳನ್ನು ತೀರಿಸುವ ಮೂಲಕ, ಅಲ್ಲಾಹು ಅತ್ಯಧಿಕ ಒಳಿತು ಮತ್ತು ಅಪಾರ ಪುಣ್ಯವನ್ನಿಟ್ಟಿರುವ ಇತರ ಹಕ್ಕುಗಳನ್ನು ಹಾಗೂ ಹೊಣೆಗಾರಿಕೆಗಳನ್ನು ನೆರವೇರಿಸುವುದು ಸಾಧ್ಯವಾಗುತ್ತದೆ.

**ಮೊದಲನೆಯ ಹಕ್ಕು:**

“ನೀನು ಅವನನ್ನು ಸಂಧಿಸಿದರೆ ಅವನಿಗೆ ಸಲಾಮ್ ಹೇಳು.”

ಖಂಡಿತವಾಗಿಯೂ ಸಲಾಮ್ ಎಂಬುದು ಪ್ರೀತಿಗಿರುವ ಕಾರಣವಾಗಿದೆ. ಪ್ರೀತಿಸು ವುದು ವಿಶ್ವಾಸಕ್ಕೆ ಅನಿವಾರ್ಯವಾಗಿದೆ. ವಿಶ್ವಾಸವು ಸ್ವರ್ಗ ಪ್ರವೇಶಕ್ಕೆ ಅನಿವಾರ್ಯ ವಾಗಿದೆ. ಪ್ರವಾದಿ(ﷺ)ರವರು ಹೇಳಿದರು:

«وَالَّذِي نَفْسِي بِيَدِهِ، لَا تَدْخُلُوا الْجَنَّةَ حَتَّى تُؤْمِنُوا، وَلَا تُؤْمِنُونَ حَتَّى تَحَابُّوا، أَفَلَا أَدُلُّكُمْ عَلَى شَيْءٍ إِذَا فَعَلْتُمُوهُ تَحَابَبْتُمْ، أَفْشُوا السَّلَامَ بَيْنَكُمْ».

“ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲಾಣೆ, ನೀವು ವಿಶ್ವಾಸವಿಡುವ ತನಕ ನೀವು ಸ್ವರ್ಗವನ್ನು ಪ್ರವೇಶಿಸಲಾರಿರಿ, ನೀವು ಪರಸ್ಪರ ಪ್ರೀತಿಸುವ ತನಕ ನೀವು ವಿಶ್ವಾಸವಿಡಲಾರಿರಿ. ನಾನೊಂದು ವಿಷಯವನ್ನು ನಿಮಗೆ ಸೂಚಿಸಲೇ? ಅದನ್ನು ಮಾಡಿದರೆ ನೀವು ಪರಸ್ಪರ ಪ್ರೀತಿಸುವವರಾಗುವಿರಿ. ನೀವು ನಿಮ್ಮ ಮಧ್ಯೆ ಸಲಾಮನ್ನು ವ್ಯಾಪಕಗೊಳಿಸಿರಿ.”

ಸಲಾಮ್ ಹೇಳುವುದು ಇಸ್ಲಾಮಿನ ಸದ್ಗುಣಗಳಲ್ಲಿ ಸೇರಿದ್ದಾಗಿದೆ. ಯಾಕೆಂದರೆ ಇಬ್ಬರು ವ್ಯಕ್ತಿಗಳು ಪರಸ್ಪರ ಸಂಧಿಸುವಾಗ ಒಬ್ಬನು ಇನ್ನೊಬ್ಬನಿಗೆ ಅವನನ್ನು ಕೆಡುಕಿನಿಂದ ಪಾರು ಮಾಡಲು ಮತ್ತು ಎಲ್ಲ ವಿಧ ಒಳಿತುಗಳನ್ನು ತರುವ ರಹ್ಮತ್ ಹಾಗೂ ಬರಕತ್ ಲಭ್ಯವಾಗಲು ಪ್ರಾರ್ಥಿಸುತ್ತಾನೆ. ಇದರ ಬಳಿಕ ಅವನು ಮಂದಹಾಸ ಬೀರುತ್ತಾನೆ ಮತ್ತು ಸಂದರ್ಭಕ್ಕೆ ತಕ್ಕ ಉತ್ತಮ ಮಾತುಗಳನ್ನಾಡುತ್ತಾನೆ. ಇದು ಅವರಿಬ್ಬರ ನಡುವಿನ ಸಂಬಂಧವನ್ನು ಮತ್ತು ಪ್ರೀತಿಯನ್ನು ಬೆಸೆಯುತ್ತದೆ ಹಾಗೂ ಅವರಿಬ್ಬರ ಅಪರಿಚಿತತೆ ಹಾಗೂ ಸಂಬಂಧ ಕಡಿಯುವಿಕೆಯನ್ನು ನಿವಾರಿಸುತ್ತದೆ.

ಆದ್ದರಿಂದ ಸಲಾಮ್ ಎಂಬುದು ಮುಸ್ಲಿಮನ ಹಕ್ಕಾಗಿದೆ. ಸಲಾಮನ್ನು ತದ್ರೂಪವಾಗಿ ಅಥವಾ ಅದಕ್ಕಿಂತಲೂ ಉತ್ತಮವಾಗಿ ಮರಳಿಸುವುದು ಕಡ್ಡಾಯವಾಗಿದೆ. ಮೊಟ್ಟ ಮೊದಲು ಸಲಾಮ್ ಹೇಳುವವನು ಜನರಲ್ಲೇ ಅತ್ಯುತ್ತಮನಾಗಿದ್ದಾನೆ.

**ಎರಡನೆಯ ಹಕ್ಕು:**

"ಅವನು ನಿನ್ನನ್ನು ಕರೆದರೆ ಅವನಿಗೆ ಉತ್ತರ ನೀಡು."

ಅಂದರೆ ಅವನು ನಿನ್ನನ್ನು ಆಹಾರ ಅಥವಾ ಪಾನೀಯ ಸೇವಿಸಲು ಆಹ್ವಾನಿಸಿದರೆ ನಿನ್ನನ್ನು ಸಮೀಪಿಸಿದ ಮತ್ತು ಆಹ್ವಾನ ನೀಡುವ ಮೂಲಕ ನಿನ್ನನ್ನು ಗೌರವಿಸಿದ ನಿನ್ನ ಸಹೋದರನ ಆಸೆಯನ್ನು ನೆರವೇರಿಸು. ನಿನಗೆ ಯಾವುದೇ ವಿನಾಯಿತಿಯಿಲ್ಲದಿದ್ದರೆ ಅವನ ಆಹ್ವಾನಕ್ಕೆ ಓಗೊಡು.

**ಮೂರನೆಯ ಹಕ್ಕು:**

"ಅವನು ನಿನ್ನೊಂದಿಗೆ ಸಲಹೆ ಕೇಳಿದರೆ ಅವನಿಗೆ ಸಲಹೆ ನೀಡು."

ಅಂದರೆ ಯಾವುದಾದರೊಂದು ಕೆಲಸದ ಬಗ್ಗೆ ಅದನ್ನು ಮಾಡಬಹುದೇ ಅಥವಾ ಮಾಡಬಾರದೇ ಎಂದು ಅವನು ನಿನ್ನೊಂದಿಗೆ ಅಭಿಪ್ರಾಯ ಕೇಳಿದರೆ ನೀನು ನಿನ್ನ ಸ್ವಂತಕ್ಕಾಗಿ ಯಾವ ಅಭಿಪ್ರಾಯವನ್ನು ಇಷ್ಟಪಡುತ್ತೀಯೋ ಅದನ್ನೇ ಅವನಿಗೂ ಹೇಳು. ಆ ಕೆಲಸವು ಎಲ್ಲ ವಿಧಗಳಲ್ಲೂ ಪ್ರಯೋಜನಕರವಾಗಿದ್ದರೆ ಅದಕ್ಕಾಗಿ ಅವನನ್ನು ಪ್ರೋತ್ಸಾಹಿಸು. ಅದು ಹಾನಿಕರವಾಗಿದ್ದರೆ ಅವನನ್ನು ಎಚ್ಚರಿಸು. ಅದು ಪ್ರಯೋಜನ ಮತ್ತು ಹಾನಿಗಳೆರಡನ್ನೂ ಒಳಗೊಂಡಿದ್ದರೆ ಅದನ್ನು ಅವನಿಗೆ ವಿವರಿಸಿಕೊಡು ಮತ್ತು ಪ್ರಯೋಜನ ಹಾಗೂ ಹಾನಿಗಳನ್ನು ತೂಗಿ ನೋಡು. ಅದೇ ರೀತಿ ಬೇರೊಬ್ಬ ವ್ಯಕ್ತಿಯ ವ್ಯವಹಾರದ ಬಗ್ಗೆ ಅವನು ನಿನ್ನೊಂದಿಗೆ ಅಭಿಪ್ರಾಯ ಕೇಳಿದರೆ, ಅಥವಾ ಮದುವೆ ಮಾಡಿಸುವ ಯಾ ಮದುವೆಯಾಗುವ ವಿಷಯದಲ್ಲಿ ಅವನು ನಿನ್ನೊಂದಿಗೆ ಅಭಿಪ್ರಾಯ ಕೇಳಿದರೆ ಅವನಿಗೆ ಶುದ್ಧವಾದ ಮತ್ತು ಪ್ರಾಮಾಣಿಕವಾದ ಅಭಿಪ್ರಾಯವನ್ನು ಹೇಳು. ನೀನು ನಿನ್ನ ಸ್ವಂತ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ತಾಳುತ್ತೀಯೋ ಅದೇ ಅಭಿಪ್ರಾಯವನ್ನು ಅವನಿಗೂ ಹೇಳು. ಆದರೆ ಯಾವುದೇ ವಿಷಯದಲ್ಲಾದರೂ ಅವನನ್ನು ವಂಚಿಸುವುದರ ಬಗ್ಗೆ ಎಚ್ಚರಿಕೆ ವಹಿಸು. ಯಾಕೆಂದರೆ ಮುಸ್ಲಿಮರನ್ನು ವಂಚಿಸುವವನು ಮುಸ್ಲಿಮರಲ್ಲಿ ಸೇರಿದವನಲ್ಲ. ಮಾತ್ರವಲ್ಲ, ಅವನು ಪ್ರಾಮಾಣಿಕವಾಗಿ ಸಲಹೆ ನೀಡುವ ಕಡ್ಡಾಯ ವನ್ನೂ ತೊರೆದವನಾಗುತ್ತಾನೆ.

ಪ್ರಾಮಾಣಿಕವಾಗಿ ಸಲಹೆ ನೀಡುವುದು ಅನಿರ್ಬಂಧಿತವಾದ ಕಡ್ಡಾಯವಾಗಿದೆ. ಅವನು ನಿನ್ನೊಂದಿಗೆ ಪ್ರಾಮಾಣಿಕವಾದ ಸಲಹೆಯನ್ನು ಮತ್ತು ಪ್ರಯೋಜನಕರವಾದ ಅಭಿಪ್ರಾಯವನ್ನು ಕೇಳುವವನಾದರೆ ಈ ಕಡ್ಡಾಯವು ಇನ್ನಷ್ಟು ಮಹತ್ವವುಳ್ಳದ್ದಾಗುತ್ತದೆ. ಆದ್ದರಿಂದಲೇ ಪ್ರವಾದಿ(ﷺ)ರವರು ಈ ವಿಷಯವನ್ನು ಈ ಮಹತ್ವ ಪೂರ್ಣ ಹಕ್ಕುಗಳಲ್ಲಿ ಸೇರಿಸಿದ್ದಾರೆ. ಧರ್ಮವು ಪ್ರಾಮಾಣಿಕತೆಯಾಗಿದೆ ಎಂಬ ಹದೀಸಿನ ವ್ಯಾಖ್ಯಾನದಲ್ಲಿ ನಾನಿದನ್ನು ವಿವರಿಸಿದ್ದೇನೆ. ಅದನ್ನು ಇಲ್ಲಿ ಪುನರಾವರ್ತಿಸುವುದರಲ್ಲಿ ಯಾವುದೇ ಪ್ರಯೋಜನವೂ ಇರಲಾರದು.

**ನಾಲ್ಕನೆಯ ಹಕ್ಕು:**

**“**ಅವನು ಸೀನಿದ ಬಳಿಕ ಅಲ್ಲಾಹನನ್ನು ಸ್ತುತಿಸಿದರೆ ಅವನಿಗೆ ತಶ್ಮೀತ್ ಹೇಳು.**”**

ಯಾಕೆಂದರೆ ಸೀನುವುದು ಅಲ್ಲಾಹನ ಅನುಗ್ರಹವಾಗಿದೆ. ಇದರಿಂದಾಗಿ ಮನುಷ್ಯನ ಶರೀರದೊಳಗೆ ಕಟ್ಟಿ ನಿಂತ ವಾಯು ಹೊರಬರುತ್ತದೆ. ಒಂದು ದ್ವಾರವನ್ನು ಉಂಟು ಮಾಡುವ ಮೂಲಕ ಈ ವಾಯು ಹೊರಹೋಗಲು ಅಲ್ಲಾಹು ಸುಲಭೀಕರಿಸುತ್ತಾನೆ. ಇದರಿಂದಾಗಿ ಸೀನಿದವನು ನಿರಾಳನಾಗುತ್ತಾನೆ. ಆದ್ದರಿಂದ ಈ ಅನುಗ್ರಹಕ್ಕಾಗಿ ಅಲ್ಲಾಹನನ್ನು ಸ್ತುತಿಸುವುದನ್ನು ಅಲ್ಲಾಹು ಶರೀಅತ್ ಆಗಿ ಮಾಡಿದ್ದಾನೆ. ಇದನ್ನು ಆಲಿಸಿದ ಅವನ ಮುಸ್ಲಿಮ್ ಸಹೋದರನು ‘ಯರ್‌ಹಮುಕಲ್ಲಾಹು’ ಎಂದು ಹೇಳುವುದನ್ನೂ ಶರೀಅತ್ ಆಗಿ ಮಾಡಿದ್ದಾನೆ. ಇದನ್ನು ಸೀನಿದವನು ಆಲಿಸಿದರೆ ಅವನು ‘ಯಹ್ದೀಕುಮುಲ್ಲಾಹು ವಯುಸ್ಲಿಹು ಬಾಲಕುಮ್’ ಎಂದು ಹೇಳಬೇಕಾಗಿದೆ. ಆದರೆ ಯಾರು ಸೀನಿದ ಬಳಿಕ ಅಲ್ಲಾಹನನ್ನು ಸ್ತುತಿಸುವುದಿಲ್ಲವೋ ಅವನು ಇತರರಿಂದ ತಶ್ಮೀತ್ ಹೇಳಿಸಲು ಅರ್ಹಪಡುವುದಿಲ್ಲ. ಆದ್ದರಿಂದ ಅವನು ಅದಕ್ಕಾಗಿ ತನ್ನನ್ನೇ ಹೊರತು ಯಾರನ್ನೂ ದೂಷಿಸಬೇಕಾಗಿಲ್ಲ. ಅವನು ತನಗೋಸ್ಕರ ಲಭ್ಯವಾಗುವ ಎರಡು ಅನುಗ್ರಹಗಳನ್ನು ಕಳೆದುಕೊಳ್ಳುತ್ತಾನೆ.

ಒಂದು: ಅಲ್‌ಹಮ್ದುಲಿಲ್ಲಾಹ್ ಎಂದು ಹೇಳುವ ಅನುಗ್ರಹ.

ಇನ್ನೊಂದು: ತನ್ನ ಸಹೋದರನು ತನಗಾಗಿ ಪ್ರಾರ್ಥಿಸುವ ಅನುಗ್ರಹ.

**ಐದನೆಯ ಹಕ್ಕು:**

"ಅವನು ರೋಗಿಯಾದರೆ ಅವನನ್ನು ಸಂದರ್ಶಿಸು."

ರೋಗಿಯನ್ನು ಸಂದರ್ಶಿಸುವುದು ಮುಸ್ಲಿಮರ ಹಕ್ಕಾಗಿದೆ. ಇನ್ನು ಆ ರೋಗಿಯು ಸಂಬಂಧಿಕ, ಗೆಳೆಯ ಮುಂತಾದವರಾಗಿದ್ದರೆ ಈ ಹಕ್ಕು ಇನ್ನಷ್ಟು ಮಹತ್ವವನ್ನು ಪಡೆಯುತ್ತದೆ. ಅದು ಶ್ರೇಷ್ಠವಾದ ಸತ್ಕರ್ಮವಾಗಿದೆ. ಯಾರಾದರೂ ಮುಸ್ಲಿಮನಾದ ತನ್ನ ಸಹೋದರನನ್ನು ಸಂದರ್ಶಿಸಿದರೆ ಅವನು ರಹ್ಮತ್‌ನಲ್ಲಿ ಪ್ರವೇಶಿಸಿದವನಾಗು ತ್ತಾನೆ. ಅವನು ಅವನ ಬಳಿ ಕುಳಿತಾಗ ರಹ್ಮತ್ ಅವನನ್ನು ಆವರಿಸುತ್ತದೆ. ಅವನು ದಿನದ ಆರಂಭದಲ್ಲಿ ಅವನನ್ನು ಸಂದರ್ಶಿಸಿದರೆ ಸಂಜೆಯ ತನಕ ಮಲಕ್‌ಗಳು ಅವನಿಗಾಗಿ ಪ್ರಾರ್ಥಿಸುತ್ತಾರೆ. ಅವನು ದಿನದ ಕೊನೆಯಲ್ಲಿ ಸಂದರ್ಶಿಸಿದರೆ ಬೆಳಗ್ಗಿನ ತನಕ ಮಲಕ್‌ಗಳು ಅವನಿಗಾಗಿ ಪ್ರಾರ್ಥಿಸುತ್ತಾರೆ. ಸಂದರ್ಶಿಸುವವನು ರೋಗಿಯ ಉಪಶಮನಕ್ಕಾಗಿ ಪ್ರಾರ್ಥಿಸಬೇಕಾಗಿದೆ. ಅವನಿಗೆ ನೆಮ್ಮದಿಯುಂಟಾಗುವಂತೆ ಮಾಡ ಬೇಕಾಗಿದೆ. ಅವನ ಮನಸ್ಸಿನಲ್ಲಿ ಶುಭವಾರ್ತೆ ಮತ್ತು ಆರೋಗ್ಯವನ್ನು ತುಂಬ ಬೇಕಾಗಿದೆ. ಅಲ್ಲಾಹನೆಡೆಗೆ ತೌಬಾ ಮಾಡುವುದನ್ನು ಮತ್ತು ಪ್ರಯೋಜನಕರವಾದ ವಸಿಯ್ಯತ್ ಮಾಡುವುದನ್ನು ನೆನಪಿಸಿಕೊಡಬೇಕಾಗಿದೆ. ಆದರೆ ಬಹಳ ಹೊತ್ತು ಅವನ ಬಳಿ ಕೂರಬಾರದು. ಬದಲಾಗಿ ಸಂದರ್ಶನವೆಂಬ ಹಕ್ಕನ್ನು ತೀರಿಸುವಷ್ಟು ಸಮಯ ಮಾತ್ರ ಕೂರಬೇಕಾಗಿದೆ. ತಾನು ಹೆಚ್ಚು ಹೆಚ್ಚು ಸಂದರ್ಶಿಸುವುದು ಮತ್ತು ಹೆಚ್ಚು ಹೊತ್ತು ಅಲ್ಲಿ ಕೂರುವುದು ರೋಗಿಯ ಮೇಲೆ ಉತ್ತಮ ಪರಿಣಾಮ ಬೀರುವುದಾದರೆ ಪರವಾಗಿಲ್ಲ. ಯಾಕೆಂದರೆ ಪ್ರತಿಯೊಂದು ಸ್ಥಳಕ್ಕೂ ಅದರದ್ದೇ ಆದ ನಿಬಂಧನೆ ಗಳಿರುತ್ತವೆ.

**ಆರನೆಯ ಹಕ್ಕು:**

"ಅವನು ಮೃತಪಟ್ಟರೆ ಅವನನ್ನು ಹಿಂಬಾಲಿಸು."

ಯಾಕೆಂದರೆ ಜನಾಝು ನಮಾಝಿನ ತನಕ ಯಾರಾದರೂ ಮೃತದೇಹವನ್ನು ಹಿಂಬಾಲಿಸಿದರೆ ಅವನಿಗೆ ಒಂದು ಕೀರಾತ್ (ಒಂದು

ಕೀರಾತ್ ಎಂದರೆ ಉಹುದ್ ಪರ್ವತದಷ್ಟು ಪುಣ್ಯ) ಪುಣ್ಯವಿದೆ. ಯಾರಾದರೂ ದಫನ ಮಾಡುವ ತನಕ ಹಿಂಬಾಲಿಸಿದರೆ ಅವನಿಗೆ ಎರಡು ಕೀರಾತ್ ಪುಣ್ಯವಿದೆ. ಮೃತದೇಹವನ್ನು ಹಿಂಬಾಲಿಸುವುದು ಅಲ್ಲಾಹನಿಗಿರುವ ಹಕ್ಕಾಗಿದೆ, ಮೃತದೇಹಕ್ಕಿರುವ ಹಕ್ಕಾಗಿದೆ ಮತ್ತು ಮೃತಪಟ್ಟವನ ಜೀವಂತ ಸಂಬಂಧಿಕರಿಗಿರುವ ಹಕ್ಕಾಗಿದೆ.

**[ಬಹ್ಜತು ಕುಲೂಬಿಲ್ ಅಬ್ರಾರ್ ವಕುರ್ರತು ಉಯೂನಿಲ್ ಅಖ್ಯಾರ್ ಫೀ ಶರ್ಹಿ ಜವಾಮಿ ಇಲ್ ಅಖ್ಬಾರ್ – ಹದೀಸ್ ನಂ. 29]**

**وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أجْمَعِين .**

*********